ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಯಲಹಂಕ ವಲಯ, ವಿದ್ಯಾರಣ್ಯಪುರ

ಸಂ. ನೋ.ಅ/ಬಿ.ಬಿ.ಎಂ.ಪಿ/ವಿ–14 /ಪಿಆರ್ ಸಂ/07/2022–23

ವಿದ್ಯಾರಣ್ಯಪುರ ವಾರ್ಡ್ ಕಛೇರಿ
ಇಂದಿರಾ ಕ್ಯಾಂಟೀನ್ ಪಕ್ಕ,
ಹೆಚ್.ಎಂ.ಟಿ ಲೇಔಟ್, 1ನೇ ಬ್ಲಾಕ್,
ಬಿಬಿಎಂಪಿ, ಬೆಂಗಳೂರು 560097
ದಿನಾಂಕ : 03/12/2022

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ * ಬಿಬಿಎಂಪಿ, ಬೆಂಗಳೂರು–97 * ವಿದ್ಯಾರಣ್ಯಪುರ ಉಪ-ವಿಭಾಗ

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020–21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 14 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 03/12/2022 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಜರುಗಿದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದವರ ಹೆಸರು | ಪದನಾಮ |
|---|---|---|
| 1 | ಶ್ರೀಮತಿ ರಶ್ಮಿ | ನೋಡಲ್ ಅಧಿಕಾರಿ ಹಾಗೂ ಹಿರಿಯ ಸಹಾಯಕ ನಿರ್ದೇಶಕರು (ತೋಟಗಾರಿಕೆ), ತೋಟಗಾರಿಕೆ ವಿಭಾಗ |
| 2 | ಶ್ರೀ ಅರ್ಚನಾ | ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು |
| 3 | ಶ್ರೀಮತಿ ಧನಲಕ್ಷ್ಮಿ ಎಂ | ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ |
| 4 | ಶ್ರೀ ಲಿಂಗರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ ನಿತಿನ್ ಜಿ | ಸಹಾಯಕ ಅಭಿಯಂತರರು, ಕೆರೆಗಳು |
| 6 | ಶ್ರೀ ಬಡಿಗೇರ್ | ಟ್ರಾಫಿಕ್ ಪೋಲಿಸ್ |
| 7 | ಶ್ರೀ ಸಿದ್ದರಾಜು | ಕಿರಿಯ ಆರೋಗ್ಯ ಪರಿವೀಕ್ಷಕರು |
| 8 | ಶ್ರೀ ನಂಜೇಗೌಡ | ಕಂದಾಯ ಪರಿವೀಕ್ಷಕರು |
| 9 | ಶ್ರೀ ವೆಂಕಟೇಗೌಡ | ಕಂದಾಯ ಪರಿವೀಕ್ಷಕರು |
| 10 | ಶ್ರೀ ರಘು | ವಿಪತ್ತು ಪರಿಣಿತರು |
| 11 | ಶ್ರೀ ನಾರಾಯಣ | ಬಿ.ಇ.ಎಲ್ ಲೇಔಟ್, ಸಾರ್ವಜನಿಕರು |
| 12 | ಶ್ರೀ ಕೆ ಮಂಜುನಾಥ ಪ್ರಸಾದ್ | ಸಾರ್ವಜನಿಕರು |
| 13 | ಶ್ರೀ ಶಶಾಂಕ್ | ಸಾರ್ವಜನಿಕರು |
| 14 | ಶ್ರೀಮತಿ ಮಾಧುರಿ | ಸಾರ್ವಜನಿಕರು |
| 15 | ಇತರೆ ಸಾರ್ವಜನಿಕರು | |

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಸ್ವಾಗತಿಸಿ ಹಿಂದಿನ ಸಭೆಯ ನಡುವಳಿಗಳನ್ನು ಚರ್ಚಿಸಿ ಇಂದಿನ ಸಭೆಯನ್ನು ನಡೆಸಲಾಯಿತು.

ದಿನಾಂಕ 03/12/2022ರಂದು ಚರ್ಚಿಸಿರುವ ಸಭಾ ನಡವಳಿ

| ಕ್ರ.ಸಂ. | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕ... ಅಧಿಕಾರಿ/ಇಲಾ... |
|---|---|---|---|
| 1 | ಬಿ.ಇ.ಎಲ್ ಬಡಾವಣೆ 9ನೇ ಬಿ ಅಡ್ಡರಸ್ತೆಯಲ್ಲಿ ಏರ್‌ಟೆಲ್, ಜಿಯೋ ವತಿಯಿಂದ ರಸ್ತೆ ಅಗೆದಿದ್ದು, ಸರಿಪಡಿಸಲು ಕೋರಿದರು | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಕ್ರಮ ವಹಿಸಲಾಗುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ |
| 2 | ಬೆಸ್ಕಾಂ, ಜಿಯೋ, ಏರ್‌ಟೆಲ್ ವತಿಯಿಂದ ಅನಧಿಕೃತವಾಗಿ ರಸ್ತೆ ಅಗೆಯುತ್ತಿರುವುದಕ್ಕೆ ಕ್ರಮ ವಹಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಶೀಘ್ರದಲ್ಲಿ ಕ್ರಮವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯಪುರ ಉಪವಿಭಾಗ |
| 3 | ಬಿ.ಇ.ಎಲ್ 5ನೇ ಬ್ಲಾಕ್, 4ನೇ ಅಡ್ಡರಸ್ತೆಯಲ್ಲಿ ಚರಂಡಿ ಮಾಡುವಾಗ ಸ್ಲ್ಯಾಬ್‌ಗಳನ್ನು ತೆಗೆದಿದ್ದು, ವಯಸ್ಕರ ಓಡಾಟಕ್ಕೆ ತೊಂದರೆ ಉಂಟಾಗುತ್ತಿರುವುದರಿಂದ ಸರಿಪಡಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಕ್ರಮವಹಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯಪುರ ಉಪವಿಭಾಗ |
| 4 | ಹೆಚ್.ಎಂ.ಟಿ 3ನೇ ಬ್ಲಾಕ್, 9ನೇ ಅಡ್ಡರಸ್ತೆಯಲ್ಲಿ ಚರಂಡಿ ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ಹಾಗೂ ಸಪ್ತಗಿರಿ ಬಡಾವಣೆ, 3ನೇ ಮತ್ತು 4ನೇ ಮುಖ್ಯ ರಸ್ತೆಯಲ್ಲಿ ಕಲ್ವರ್ಟ್ ಬ್ಲಾಕ್ ಆಗಿರುವುದರಿಂದ ಸರಿಪಡಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಕ್ರಮ ವಹಿಸಲಾಗುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ |
| 5 | ಬಸವಸಮಿತಿ 3ನೇ ಬಿ ಅಡ್ಡರಸ್ತೆಯಲ್ಲಿ ಪಾದಚಾರಿ ಮಾರ್ಗದ ರಸ್ತೆ ಮಟ್ಟವನ್ನು ತಗ್ಗಿಸಲು, ಹೆಚ್.ಎಂ.ಟಿ ಬಡಾವಣೆ, 3ನೇ ಬ್ಲಾಕ್, 9ನೇ ಮತ್ತು 10ನೇ ಅಡ್ಡರಸ್ತೆಯಲ್ಲಿ ಚರಂಡಿ ಸ್ಲ್ಯಾಬ್ ಎತ್ತರಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಕ್ರಮ ವಹಿಸಲಾಗುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ |
| 6 | ಹೆಚ್.ಎಂ.ಟಿ ಬಡಾವಣೆಯಲ್ಲಿ ಅಳವಡಿಸಿರುವ ಪೈಪ್‌ಲೈನ್ ತುಂಬಾ ಹಳೆಯದಾಗಿರುವುದರಿಂದ ಬದಲಿ ಪೈಪ್‌ಲೈನ್ ವ್ಯವಸ್ಥೆ ಕಲ್ಪಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಕ್ರಮ ವಹಿಸಲಾಗುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ |
| 7 | ಶುದ್ಧ ಕುಡಿಯುವ ನೀರಿನ ಘಟಕ ರಿಪೇರಿ ಆಗಿರುವುದರಿಂದ ಸರಿಪಡಿಸಲು ಹಾಗೂ ಇದರ ನಿರ್ವಹಣೆ ಬಗ್ಗೆ ಕೋರಿದರು. | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಕ್ರಮ ವಹಿಸಲಾಗುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ |
| 8 | ತಿಂಡ್ಲು, ಬಸವ ಸಮಿತಿ, ಸಪ್ತಗಿರಿ ಬಡಾವಣೆ, ಸೋಮಣ್ಣ ಗಾರ್ಡನ್‌ನಲ್ಲಿ ರಾಜಕಾಲುವೆ ಸ್ವತ್ತು (SWD) ಎಂದು ಗುರುತು ಮಾಡಿ ಹೋಗಿದ್ದು, ಮುಂದಿನ ಕಾರ್ಯಗಳ ಬಗ್ಗೆ ವಿವರಣೆ ಕೋರಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಜಕಾಲುವೆ ವಿಭಾಗ ರವರಿಗೆ ಅಹವಾಲು ಸಲ್ಲಿಸಲು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ನೀರು ಗಾಲುವೆ ವಿಭಾಗ |
| 9 | ಎಂ.ಈ.ಎಸ್ ಸ್ಕೂಲ್ ಹತ್ತಿರ, 11ನೇ ಬಿ ಅಡ್ಡರಸ್ತೆಯಲ್ಲಿ ರಸ್ತೆಗೆ ಅಡ್ಡಲಾಗಿ ಅಳವಡಿಸಿರುವ ಬ್ಯಾರಿಕೇಡ್ ತೆರವುಗೊಳಿಸಲು, ಎಂ.ಈ.ಎಸ್ ಸ್ಕೂಲ್ ಪಕ್ಕದ ರಸ್ತೆಯಲ್ಲಿ ಎಂ.ಈ.ಎಸ್ ಸ್ಕೂಲ್ ಹುಡುಗರು ಪರವಾನಗಿ ಇಲ್ಲದೆ ವ್ಹೀಲಿಂಗ್ ಮಾಡುತ್ತಿರುವ ಬಗ್ಗೆ ಗಮನಹರಿಸಲು ಕೋರಿದರು | ಸಭೆಯಲ್ಲಿ ಹಾಜರಿದ್ದ ಟ್ರಾಫಿಕ್ ಪೋಲೀಸ್ ರವರು ಸ್ಥಳ ಪರಿಶೀಲಿಸಿ ಕ್ರಮ ವಹಿಸುವುದಾಗಿ ತಿಳಿಸಿದರು. | ಟ್ರಾಫಿಕ್ ಪೋಲೀಸ್ ಯಲಹಂಕ |

| | | | |
|---|---|---|---|
| | ಬಿ.ಇ.ಎಲ್ 3ನೇ ಬ್ಲಾಕ್, ಎಂ.ಈ.ಎಸ್ ಸ್ಕೂಲ್ ಹತ್ತಿರ ಟ್ರಾನ್ಸ್‌ಫಾರ್ಮರ್ ಬದಲಾಯಿಸಲು ಕೋರಿದರು | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಸ.ಕಾ.ಅ, ಬೆಸ್ಕಾಂ ರವರೊಂದಿಗೆ ಚರ್ಚಿಸುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ |
| 11 | ವಾಣಿಜ್ಯ ಕಟ್ಟಡಗಳ ಮುಂಭಾಗ ರಸ್ತೆಯಲ್ಲಿ ಅನಧಿಕೃತವಾಗಿ ವಾಹನಗಳ ನಿಲುಗಡೆಗೊಳಿಸುತ್ತಿರುವುದರಿಂದ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆ ಉಂಟಾಗುತ್ತಿರುವುದರಿಂದ ಕ್ರಮ ವಹಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಗೆ ಕ್ರಮವಹಿಸುವುದಾಗಿ ಸೂಚಿಸಿದರು. | ಸಹಾಯಕ ನಿರ್ದೇಶಕರು ನಗರ ಯೋಜನೆ |
| 12 | ವಿದ್ಯಾರಣ್ಯಪುರ ವಾರ್ಡ್ ವ್ಯಾಪ್ತಿಯ ಉದ್ಯಾನವನಗಳು, ಬಸ್ ನಿಲ್ದಾಣಗಳು ಹಾಗೂ ಆಟದ ಮೈದಾನದ ಮಾಹಿತಿ ನೀಡಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಸಹಾಯಕ ಕಂದಾಯ ಅಧಿಕಾರಿಗಳು ವಿದ್ಯಾರಣ್ಯಪುರ ಉಪವಿಭಾಗ ರವರಿಗೆ ಮಾಹಿತಿ ಒದಗಿಸಲು ಸೂಚಿಸಲಾಗುವುದು ಎಂದು ತಿಳಿಸಿದರು. | ಸಹಾಯಕ ಕಂದಾಯ ಅಧಿಕಾರಿಗಳು ವಿದ್ಯಾರಣ್ಯಪುರ ಉಪವಿಭಾಗ |
| 13 | ಬಿ.ಇ.ಎಲ್ ಬಡಾವಣೆ 11ನೇ ಬಿ ಅಡ್ಡರಸ್ತೆಯಲ್ಲಿ Music ಇಲ್ಲದೆ ಒಣ ತ್ಯಾಜ್ಯ ಸಂಗ್ರ ಹಿಸುತ್ತಿರುವುದರಿಂದ ಅಲ್ಲಿನ ಸಾರ್ವಜನಿಕರಿಗೆ ಕಸದ ಗಾಡಿ ಬರುವಿಕೆಯ ಸೂಚನೆ ಇಲ್ಲದೆ ಇರುವುದರಿಂದ ಕಡ್ಡಾಯವಾಗಿ Visual ಹಾಕಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಕ್ರಮವಹಿಸಲಾಗುವುದು ಎಂದು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ |
| 14 | ಹೆಚ್.ಎಂ.ಟಿ ಲೇಔಟ್, 3ನೇ ಬ್ಲಾಕ್, 9ನೇ ಅಡ್ಡರಸ್ತೆಯಲ್ಲಿ 2 ತಿಂಗಳಿನಿಂದ ರಸ್ತೆ ಗುಡಿಸುವಿಕೆ ಕಾರ್ಯ ನಿರ್ವಹಿಸದೆ ಇರುವುದರಿಂದ ಕಾಲ ಕಾಲಕ್ಕೆ ರಸ್ತೆ ಗುಡಿಸುವಿಕೆ ಕಾರ್ಯ ನಿರ್ವಹಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಕ್ರಮವಹಿಸಲಾಗುವುದು ಎಂದು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ |
| 15 | ಬಿ.ಇ.ಎಲ್ ಲೇಔಟ್ ನಲ್ಲಿ ರಸ್ತೆಯ ನಾಮಫಲಕಗಳ ವಿಳಾಸ ಬದಲಾಗಿರುವುದರಿಂದ ಗಮನ ಹರಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಸಂಬಂದಿಸಿದ ಇಲಾಖೆಗೆ ಕ್ರಮವಹಿಸಲು ಸೂಚಿಸಲಾಗುವುದು ಎಂದು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ |
| 16 | ಬಿ.ಇ.ಎಲ್ ಬಡಾವಣೆ, 3ನೇ ಬ್ಲಾಕ್, ಶಿವ ಬಾರ್ ಹತ್ತಿರ ಬೀದಿ ದೀಪಗಳಿಗೆ ಅಡ್ಡಲಾಗಿ ಬೆಳೆದಿರುವ ಮರದ ರೆಂಬೆ ಕೊಂಬೆಗಳನ್ನು ಕತ್ತರಿಸಲು ಕೋರಿದರು. | ಸಭೆಯಲ್ಲಿ ಹಾಜರಿದ್ದ ನೋಡೆಲ್ ಅಧಿಕಾರಿಗಳು ಅರಣ್ಯ ಇಲಾಖೆಗೆ ಕ್ರಮವಹಿಸಲು ಸೂಚಿಸಲಾಗುವುದು ಎಂದು ತಿಳಿಸಿದರು. | ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ಬ್ಯಾಟರಾಯನಪುರ |

ಮುಂದಿನ ಸಭೆಯಲ್ಲಿ ವಾರ್ಡಿನ ಕುಂದು ಕೊರತೆಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಾಗುವುದು ಹಾಗೂ ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡ ಬಗ್ಗೆ ಪೂರ್ಣ ಮಾಹಿತಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಲು ಸೂಚಿಸಲಾಯಿತು

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

09/12/2022

ಸದಸ್ಯ ಕಾರ್ಯದರ್ಶಿ
ವಾರ್ಡ್ ನಂ 14, ವಿದ್ಯಾರಣ್ಯಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

Pallavi
ನೋಡೆಲ್ ಅಧಿಕಾರಿಗಳು
ವಾರ್ಡ್ ನಂ 14, ವಿದ್ಯಾರಣ್ಯಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು